# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:25.11.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.17 (ಜೆ ಪಿ ಪಾರ್ಕ್) ರಲ್ಲಿ ಶ್ರೀ. ವೆಂಕಟೇಶ್ (ಕಾರ್ಯಪಾಲಕ ಅಭಿಯಂತರರು, ಟಿವಿಸಿಸಿ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:-

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ವೆಂಕಟೇಶ್ | ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಶ್ರೀ ಎನ್. ಬಿ. ಉಮೇಶ್ | ಸಹಾಯಕ ಅಭಿಯಂತರರು |
| 3 | ಡಾ॥ ರಮ್ಯ | ವೈದ್ಯಾಧಿಕಾರಿಗಳು, ಜೆ ಪಿ ಪಾರ್ಕ್ |
| 4 | ಶ್ರೀ ರಮೇಶ್ | ಹಿ. ಆ. ಪ. |
| 5 | ಶ್ರೀ ಚನ್ನೇಶಪ್ಪ | ಬಿಡಬ್ಲ್ಯೂಎಸ್ಎಸ್‌ಬಿ |
| 6 | ಶ್ರೀ ಆಶೀರ್ವಾದ | 17/ಬಿ, ಮೇಲ್ವಿಚಾರಕರು |
| 7 | ಶ್ರೀ ಎಂ. ಸಿ. ವಿಲ್ಸನ್ | ಮೇಲ್ವಿಚಾರಕರು |
| 8 | ಶ್ರೀ ವೆಂಕಟೇಶ್ | ಮೇಲ್ವಿಚಾರಕರು |
| 9 | ಬಸವರಾಜು | ವಾರ್ಡ್-17/ಸಿ ಮೇಲ್ವಿಚಾರಕರು |
| 10 | ಶ್ರೀ ಮುರಳಿ | ಮೇಲ್ವಿಚಾರಕರು |
| 11 | ನಾಗೇಗೌಡ | ಮೇಲ್ವಿಚಾರಕರು |
| 12 | ಅಲಸ್ಟರ್ | ಮೇಲ್ವಿಚಾರಕರು |
| | ಹಾಗೂ ಇತರೆ ಸಾರ್ವಜನಿಕರು ಹಾಜರಿದ್ದರು | |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1. ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ:-

ಪೈಪ್‌ಲೈನ್ ರಸ್ತೆ, ಮುತ್ಯಾಲನಗರದಲ್ಲಿ ಮ್ಯಾನ್‌ಹೋಲ್ ಕವರ್ ಮುರಿದು ಹೋಗಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಪ್ರಾಣ ಹಾನಿ ಸಂಭವಿಸುವ ಸಾಧ್ಯತೆ ಇರುತ್ತದೆ. ಹಾಗೂ 2ನೇ ಅಡ್ಡರಸ್ತೆ, ಹೆಚ್ಎಂಟಿ ಲೇಔಟ್‌ನಲ್ಲಿ ಮ್ಯಾನ್‌ಹೋಲ್ ಬ್ಲಾಕ್ ಆಗಿ, ನೀರು ರಸ್ತೆಗೆ ಹರಿದುಬರುತ್ತಿದ್ದು, ಸುತ್ತಮುತ್ತಲಿನ ನಿವಾಸಿಗಳಿಗೆ ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಕೂಡಲೇ ಈ ಎರಡೂ ಸಮಸ್ಯೆಗಳಿಗೆ ತ್ವರಿತವಾಗಿ ಕ್ರಮಕೈಗೊಳ್ಳಬೇಕೆಂದು ಸಭೆಗೆ ಹಾಜರಾಗಿದ್ದ ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ ರವರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.

(ಸಂಬಂಧಪಟ್ಟ ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ ರವರಿಗೆ ತುರ್ತು ಕ್ರಮಕ್ಕಾಗಿ)

Scanned with CamScanner

2) ಬೀದಿ ದೀಪಗಳಗೆ ನಿರ್ವಹಣೆ ಕುರಿತು:-

ಮಾನ್ಯ ಅಧ್ಯಕ್ಷರು ಮಾತನಾಡಿ, ಜೆ ಪಿ ಪಾರ್ಕ್ ವಾಡ್‌ನಲ್ಲಿ 13ನೇ ಮುಖ್ಯರಸ್ತೆ, ಹೆಚ್.ಎಂ.ಟಿ. ಲೇಔಟ್‌ನಲ್ಲಿ ಇರುವ ಬೀದಿ ದೀಪ ಉರಿಯುತ್ತಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಗುತ್ತಿಗೆದಾರರು ಸರಿಪಡಿಸಬೇಕೆಂದು ಅಧ್ಯಕ್ಷರು ಸಹಾಯಕ ಅಭಿಯಂತರರುರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

3) ಪ್ರಾಥಮಿಕ ಆರೋಗ್ಯ ಕೇಂದ್ರ:

ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಲಸಿಕಾ ಶಿಬಿರಗಳನ್ನು ಏರ್ಪಡಿಸಿ, 1ನೇ ಡೋಸ್ ಹಾಕಿಸಿಕೊಳ್ಳದ ಕೆಲವೊಬ್ಬ ಸಾರ್ವಜನಿಕರಿಗೆ ಹಾಗೂ 2ನೇ ಡೋಸ್‌ನ್ನು ಹಾಕಿಸಿಕೊಳ್ಳದವರಿಗೆ ಅರಿವು ಮೂಡಿಸಿ, ಆದಷ್ಟು ಬೇಗ ಜೆ ಪಿ ಪಾರ್ಕ್ ವಾರ್ಡ್‌ನ್ನು ಶೇ.100 ರಷ್ಟು ಲಸಿಕೆ ನೀಡಿದ ಮಾದರಿ ವಾರ್ಡ್‌ನ್ನಾಗಿ ಮಾಡಬೇಕೆಂದು ವೈದ್ಯಾಧಿಕಾರಿಗಳಗೆ ತಿಳಸಿದರು.

4) ಘನತ್ಯಾಜ್ಯ ನಿರ್ವಹಣೆ ಬಗ್ಗೆ:

ವಾರ್ಡ್‌ನಲ್ಲಿ ಕೆಲವೊಂದು ಕಡೆಗಳಲ್ಲಿ ಬ್ಲ್ಯಾಕ್‌ಸ್ಪಾಟ್‌ಗಳು ಕಂಡುಬರುತ್ತಿರುವುದರಿಂದ ವಾರ್ಡ್‌ನ ಸೂಪರ್‌ವೈಸರ್‌ಗಳು ಮತ್ತು ಮಾರ್ಷಲ್‌ಗಳು ರಾತ್ರಿಪಾಳಯಲ್ಲಿ ಕೆಲಸ ಮಾಡಿ, ಬ್ಲ್ಯಾಕ್‌ಸ್ಪಾಟ್‌ಗಳಲ್ಲಿ ಕಸ ಹಾಕುವುದನ್ನು ತಡೆಗಟ್ಟುತ್ತಿದ್ದಾರೆ. ಅವರ ಈ ಕ್ರಮಕ್ಕಾಗಿ ಅಧ್ಯಕ್ಷರು ಶ್ಲಾಘಿಸಿದರು.

5) ಬೆಸ್ಕಾಂ :

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬಿಬಿಎಂಪಿ ಆಸ್ಪತ್ರೆ (ಜಿಮ್ ಕಟ್ಟಡ), ಬಿಲ್ಲನ್ನು ಪಾವತಿಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಹಾಯಕ ಅಭಿಯಂತರರಿಗೆ ತಿಳಸಿದರು. ಅದರಂತೆ, ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಅದಿಕಾರಿಗಳಗೆ ಕೂಡಲೇ ಬಿಲ್ಲುಗಳನ್ನು ಪಾವತಿಸಲು ಸೂಚಿಸಿದರು.

6) ಕಾಮಗಾರಿ ಇಲಾಖೆ:

ವಾರ್ಡ್‌ನಲ್ಲಿ ಕೆಲವೊಂದು ರಸ್ತೆಗಳಲ್ಲಿ ಸಣ್ಣದಾದ ರಸ್ತೆಗುಂಡಿಗಳು ಕಂಡುಬಂದಿದ್ದು, ಕೂಡಲೇ ಅದನ್ನು ಮುಚ್ಚಲು ಸಂಬಂಧಪಟ್ಟ ವಾರ್ಡ್ ಸಹಾಯಕ ಅಭಿಯಂತರರಿಗೆ ರಸ್ತೆಗುಂಡಿಗಳನ್ನು ಮುಚ್ಚಲು ತುರ್ತಾಗಿ ಕ್ರಮಕೈಗೊಳ್ಳಲು ಸೂಚಿಸಿದರು.

7) ಮಾಸ್ಕ್ ಹಾಕದಿರುವ ವ್ಯಕ್ತಿಗಳಗೆ ದಂಡ ವಿಧಿಸುವ ಬಗ್ಗೆ:-

ಪ್ರಸ್ತಾಪಿತ ವಿಷಯದ ಬಗ್ಗೆ ಮಾರ್ಷಲ್‌ಗಳೊಂದಿಗೆ ಚರ್ಚಿಸಲಾಗಿದ್ದು, ಈಗಾಗಲೇ ಒಮಿಕ್ರಾನ್ ಕೋವಿಡ್ ರಾಪಾಂತರಿ ವೈರಸ್ ಹೊರದೇಶಗಳಲ್ಲಿ ಕಂಡುಬಂದಿದ್ದು, ಮುಂಜಾಗ್ರತಾ ಕ್ರಮವಾಗಿ ವಾರ್ಡ್‌ನಲ್ಲಿ ಮಾಸ್ಕ್ ಹಾಕದೇ ತಿರುಗಾಡುವ ಸಾರ್ವಜನಿಕರಿಗೆ ಈ ಹಿಂದೆಯೇ ದಂಡ ವಿಧಿಸಲು ರಾಜ್ಯ ಸರ್ಕಾರ

Scanned with CamScanner

ಸುತ್ತೋಲೆ ಹೊರಡಿಸಿರುತ್ತದೆ. ಅದರಂತೆ, ಮಾರ್ಷಲ್‌ಗಳು ಕ್ರಮ ಕೈಗೊಂಡು ಮಾಸ್ಕ್ ಹಾಕದಿರುವ ಸಾರ್ವಜನಿಕರಿಗೆ ಸರ್ಕಾರದ ಆದೇಶದ ರೀತ್ಯಾ ಕಟ್ಟುನಿಟ್ಟಾಗಿ ದಂಡ ವಿಧಿಸಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

**(ಸಂಬಂಧಪಟ್ಟ ವಾರ್ಡ್-17ರ ವಾರ್ಡ್ ಮಾರ್ಷಲ್‌ರವರಿಗೆ ತುರ್ತು ಕ್ರಮಕ್ಕಾಗಿ)**

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವೆಂಕಟೇಶ್)
ಕಾರ್ಯಪಾಲಕ ಅಭಿಯಂತರರು ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:17

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:17

Scanned with CamScanner